LEGISLATIVE BUSINESS

ಶ್ರೀ ಜೆ.ಎಚ್. ಪಟೇಲ್.—ಸನ್ಮಾನ್ಯ ಉಪಸಭಾಧ್ಯಕ್ಷರೇ, ಈ ಬಿಲ್ ಬಗ್ಗೆ ಅತ್ಯಂತ ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಈ ಮಸೂದೆಯನ್ನು ತಂದಿರತಕ್ಕ ಉದ್ದೇಶ ಏನಿದೆ ಆ ಉದ್ದೇಶದ ಬಗ್ಗೆ ಏನೂ ಆಸಮ್ಮಾನ ಇಲ್ಲ ಎಂದು ಕೆಲವು ಸದಸ್ಯರು ಹೇಳಿದರು. ಆದರೆ ನನಗೆ ಉದ್ದೇಶದ ಬಗ್ಗೆಯೇ ಆಸಮ್ಮಾನ ಇದೆ. ಏಕೆಂದರೆ, ರಾಜ್ಯಾಂಗದ ೪೦ನೇ ಕಲಮ್ ಪ್ರಕಾರ ಇರುವುದು ಏನೆಂದರೆ, ಒಂದು ಜನತೆಯ ಸರ್ಕಾರ ಬರಬೇಕೆಂದರೆ ಅದು ಹಳ್ಳಿಗಳಿಂದ ಬರಬೇಕು ಎಂದು ಇದೆ. ಅದನ್ನು ಈ ರೀತಿ ವರ್ಣಿಸಲಾಗಿದೆ.

> 40. The State shall take steps to organise village panchayats and endow them with such powers and authority as may be necessary to enable them to function as units of self-Government.

ಹಳ್ಳಿಗರಿಗೆ ಇಷ್ಟು ಮಾಡಬೇಕೆಂದು ರಾಜ್ಯಾಂಗದಲ್ಲಿ ಬರೆದಿರುವಾಗ ಜನರಿಗೆ ತಮ್ಮಿಂದ ತಾವೇ ಆಡಳಿತ ಮಾಡಿಕೊಳ್ಳುತ್ತಿರುವುದು ಕೇಳದೇ ಇರಬಹುದು. ಇದಕ್ಕೆ ಕೆಲವು ಕಾಲ ಹಿಡಿಯುತ್ತದೆ. ಈಗ ಏನು ಸರ್ಕಾರವನ್ನು ನಡೆಸಲಾಗುತ್ತಿದೆ ಇದು ಒಂದು ಟ್ರಯಲ್ ಅಂಡ್ ಎರರ್ ಮೆಥೆಡ್ ಈ ಪ್ರಜಾಪ್ರಭುತ್ವ ಟ್ರಯಲ್ ಅಂಡ್ ಎರರ್ ಮೆಥೆಡ್ ಈ ರೀತಿ ನಾಮಕರಣ ಮಾಡುವುದು ಏನಿದೆ ಇದು, ರಾಜಕೀಯದ ಉದ್ದೇಶ ಏನಿದೆಯೆಂದು ಹೇಳಿದ್ದೇವೆ. ಮೂಲತಃ ರಾಜ್ಯಾಂಗದಲ್ಲಿ ಏನು ಸ್ಪಿರಿಟ್. ಇದೆ ಅದರ ವಿರುದ್ಧ ಹೋಗುತ್ತಿದ್ದೇವೆ. ಈಗ ನಾವು ಹೀಗೆ ಹೇಳಿದರೆ ನೀವು ಕೇಳುವುದಿಲ್ಲ. ಕಾರ್ಪೋರೇಷನ್‌ಗೆ ನಾಮಿನೇಟ್ ಮಾಡಿದಿರಿ, ನಾಳೆ ತಾಲೂಕು ಬೋರ್ಡಿಗೆ ಮಾಡಿ, ಸೊಸೈಟಿಗಳಿಗೆ ಮಾಡಿದ್ದೀರಿ. ಮುಂದೆ ಪಂಚಾಯಿತಿಗೆ ಹೋದರೆ ನಿಮ್ಮ ಪೂರ್ತಿ ಸೈಕಲ್ ಕಂಪ್ಲೀಟ್ ಆದಂತಾಗುತ್ತದೆ. ಪ್ರಜಾತಂತ್ರದ ಈ ಚಕ್ರವನ್ನು ಇಲ್ಲಿ ನೀವು ಮುರಿಯುತ್ತಿದ್ದೀರಿ ಆದ್ದರಿಂದ ಇದನ್ನು ನಾನು ವಿರೋಧ ಮಾಡಿ,ಈ ಬಿಲ್ಲನ್ನು ತಾವು ವಾಪಸ್ಸು ತೆಗೆದುಕೊಳ್ಳುವುದು ಒಳ್ಳೆಯದೆಂದು ಹೇಳಿ ನಾನು ನನ್ನ ವಿರೋಧವನ್ನು ವ್ಯಕ್ತಪಡಿಸುತ್ತಿದ್ದೇನೆ.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ, ಈ ಬಿಲ್ಲನ್ನು ತರುವಾಗ ಅವರು

> "It is considered necessary that Government should have the power to nominate the first Councillors, the Mayor and the Deputy Mayor of the newly constituted Corporations so as on a firm footing on place them"

ಎಂದು ತಮ್ಮ ಇಂಟೆನ್‌ಷನ್‌ನ್ನು ಹೇಳಿದ್ದಾರೆ. ಇಲ್ಲಿ ಕಾರ್ಪೋರೇಷನ್‌ನಲ್ಲಿ ಫರ್ಮ್ ಪುಟಿಂಗ್ ಇಡುವುದಕ್ಕೆಂದು ಅವರು ಹೇಳುತ್ತಿದ್ದಾರೆ. ನಾಮಿನೇಟೆಡ್ ಮೆಂಬರ್ಸ್‌ನ ಫರ್ಮ್ ಪುಟಿಂಗ್‌ನಲ್ಲಿ ಇಡುವುದಕ್ಕೆ ಎಂದರೆ ನಾವು ಯಾವ ರೀತಿ ಅರ್ಥ ಮಾಡಿಕೊಳ್ಳಬೇಕು ? ಕಾರ್ಪೋರೇಷನ್‌ನಲ್ಲಿ ಫರ್ಮ್ ಪುಟಿಂಗ್ ಇಡಬೇಕೆಂದರೆ ಈಗಾಗಲೇ ಎಲಕ್ಟೆಡ್ ಬಾಡಿ ಏನಿತ್ತು ಅದರಲ್ಲಿನ ಸದಸ್ಯರ ಅನುಭವವನ್ನು ಪಡೆದುಕೊಳ್ಳಬೇಕಾಗುತ್ತದೆ. ಅವರಿಗೆ ಅಲ್ಲಿನ ಏರಿಯಾ ಬಗ್ಗೆ ಮಾಹಿತಿ ಇರುತ್ತದೆ. ಅವರ ಅನುಭವ ಉಪಯೋಗಿಸಿಕೊಂಡು ಫರ್ಮ್ ಪುಟ್ಟಿಂಗ್‌ನಲ್ಲಿ ಇಡಬೇಕೆನ್ನುವುದು ಸರ್ಕಾರದ ಉದ್ದೇಶವೇ ? ಚುನಾಯಿತ ಪ್ರತಿನಿಧಿಗಳು ಇಲದಿದ್ದಾಗ. ನಾಮಿನೇಟೆಡ್ ಸದಸ್ಯರು ಬೆಂದು ಆರು ತಿಂಗಳು ಒಂದು ವರ್ಷ ಅವರ ಸ್ಥಾನಮಾನಗಳ ಬಗ್ಗೆ ಯೋಚನೆ ಮಾಡಿಕೊಂಡು ಆ ಕ್ಷೇತ್ರದ ಅಭಿವೃದ್ಧಿ ಕಾರ್ಯದ ಕಡೆಗೆ, ಅಲ್ಲಿನ ತೊಂದರೆಗಳ ಕಡೆಗೆ ಸೂಕ್ತ ಗಮನವನ್ನು ಹರಿಸುವುದಕ್ಕೆ ಹೋಗುವುದಿಲ್ಲ. ಇವರನ್ನು ಫರ್ಮ್ ಪುಟಿಂಗ್‌ನಲ್ಲಿ ಇಡುವುದಕ್ಕೆ ಹೇಗೆ ಸಾಧ್ಯ ? ಈ ಉದ್ದೇಶ ಸತ್ಯಕ್ಕೆ ದೂರವಾದುದಾಗದೆ. ಆ ಉದ್ದೇಶಕ್ಕಾದರೂ ಹಾಲಿ ಅಡ್ಮಿನಿಸ್ಟ್ರೇಟರ್ ಏನಿದ್ದಾರೆ ಅವರನ್ನು ಸ್ವಲ್ಪ ಕಾಲ ಇಟ್ಟುಕೊಂಡು ಇನ್ನು ೬ ತಿಂಗಳಲ್ಲಿ ಡೀಲಿಮಿಟೇಷನ್ ಇಟ್ಟುಕೊಂಡು ತಕ್ಷಣ ಚುನಾವಣೆ ಮಾಡಿ ಚುನಾಯಿತ ಸದಸ್ಯರಿಗೆ ಅಧಿಕಾರ ಕೊಟ್ಟರೆ ಅವರು ಆ ಕ್ಷೇತ್ರದ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಆದನ್ನು ಮಾಡಿಲ್ಲ, ಮತ್ತೊಂದು ವಿಷಯ ಏನೆಂದರೆ ಕಾರ್ಪೊರೇಷನ್‌ಗೆ ಆಗುತ್ತಾ ಇದ್ದಂತೆ

ಆ ಜಾಗದ ಮನೆಗಂದಾಯ ಜಾಸ್ತಿ ಮಾಡುತ್ತಾರೆ. ಆದರೆ ಇಲ್ಲಿನ ಕೆಲಸ ಕಾರ್ಯಗಳನ್ನು ಸರಿಯಾಗಿ ಮಾಡುವುದಿಲ್ಲ, ಬೆಂಗಳೂರು ನಗರದ ಇತಿಹಾಸ ಹೇಳಬೇಕೆಂದರೆ, ಈಗ ೧೪-೧೫ ವರ್ಷಗಳ ಕೆಳಗೆ ಕೆಲವು ಗ್ರಾಮಗಳನ್ನು ಕಾರ್ಪೊರೇಷನ್ ವ್ಯಾಪ್ತಿಗೆ ಸೇರಿಸಿಕೊಂಡರು. ಗ್ರಾಮಗಳನ್ನು ಸೇರಿಸಿ ಕೊಂಡರೂ, ಅವರು ಪಂಚಾಯ್ತಿ ತೆರಿಗೆಗಳನ್ನು ಕಟ್ಟುತ್ತಿದ್ದರು. ಗ್ರಾಮಗಳನ್ನು ಸೇರಿಸಿಕೊಂಡ ಮೇಲೆ ಕಾರ್ಪೊರೇಷನ್‌ಗೆ ಸಂಬಂಧಪಟ್ಟ ತೆರಿಗೆಗಳನ್ನು ಹಾಕಿದ್ದರೂ, ಇದುವರೆವಿಗೂ ಸಾರ್ವಜನಿಕರಿಗೆ ಆಗಬೇಕಾದ ಅನುಕೂಲಗಳನ್ನು ಮಾಡಿ ಕೊಟ್ಟಿಲ್ಲ. ಹೋದ ವರ್ಷ ನಮ್ಮ ಬತ್ತಾಯಕ್ಕೆ ಮಾನ್ಯ ಮಂತ್ರಿಗಳು ಒಂದು ಕೋಟಿ ೩೨ ಲಕ್ಷ ರೂಪಾಯಿಗಳನ್ನು ಸೇರಿಸಿಕೊಂಡು ಹಳ್ಳಿಗಳ ಅಭಿವೃದ್ಧಿಗಾಗಿ ಕೊಟ್ಟಿದ್ದೇವೆಂದು ಹೇಳಿದ್ದರು. ಈ ಹಣವನ್ನು ಸಾಲದ ರೂಪದಲ್ಲಿ ಇವತ್ತು ವಸೂಲಿ ಮಾಡುತ್ತಿದ್ದಾರೆ. ಗ್ರಾಂಟ್ ಅಂತ ಬಂದಿದ್ದು ಸಾಲದ ರೂಪದಲ್ಲಿ ಕೊಟ್ಟು ಯಾವರೀತಿಯ ಕೆಲಸ ಗಳು ಆಗುತ್ತಿಲ್ಲ. ಇರತಕ್ಕ ಮುನಿಸಿಪಾಲಿಟಿಗಳನ್ನು ವಿಭಾಗ ಮಾಡಿ, ವಿಸ್ತರಣೆ ಮಾಡಿ ಕಾರ್ಪೊರೇಷನ್‌ಗಳನ್ನು ಮಾಡಿ, ಜನಗಳಿಂದ ಕಂದಾಯ ವಸೂಲು ಮಾಡುತ್ತೀರಿ. ಆದರೆ, ಸರಿಯಾದಂತ ಬೆಳವಣಿಗೆ ಮಾಡುವುದಕ್ಕೆ ಅವಕಾಶ ಇಲ್ಲ. ಈಗ ಇರುವಂತ ಆಡಳಿತಾಧಿಕಾರಿಗಳನ್ನು ಮೂರು ತಿಂಗಳು ಆರು ತಿಂಗಳು ಎಂದು ಮುಂದುವರಿಸಿಕೊಂಡು ಹೋಗದೆ, ತಕ್ಷಣವೇ ಕಾರ್ಪೊರೇಷನ್‌ಗಳಿಗೆ ಚುನಾವಣೆ ಮಾಡಬೇಕೆಂದು ಬತ್ತಾಯ ಮಾಡುತ್ತೇನೆ ಹಾಲಿ ಇರತಕ್ಕ ಕಾರ್ಪೊರೇಷನ್‌ಗಳಿಗೆ ಚುನಾವಣೆ ಮಾಡಿ ಎಂದರೆ ನವೆಂಬರ್ ನವೆಂಬರ್ ಎಂದು ಹೇಳುತ್ತಿದ್ದೀರಿ. ಹೊಸದಾಗಿ ಮಾಡತಕ್ಕ ಕಾರ್ಪೊರೇಷನ್ ಗಳಿಗೂ ಇದನ್ನೇ ಮುಂದುವರಿಸುತ್ತೀರೋ ಏನ್ನುವ ಭಯ ನವಂಗಿದೆ, ನಾಮಿನೇಷನ್ ಸದಸ್ಯರನ್ನು ಮೂರು ವರ್ಷ ಅಂತ ಮಾಡಿ, ಮುಂದುವರಿಸುವುದು ಬೇಡವೆಂದು ಹೇಳುತ್ತೇನೆ. ೭ ವರ್ಷಗಳ ಕಾಲ ಆಡಳಿತಾಧಿಕಾರಿಯಾಗಿ ಇವತ್ತು ಮುಂದುವರಿಯುತ್ತಿದ್ದಾರೆ. ಚುನಾವಣೆಗಳು ಇಲ್ಲದೇ ನಾಮಿನೇಟೆಡ್ ಸದಸ್ಯರನ್ನು ಮುಂದುವರಿಸಿಕೊಂಡು ಹೋಗುವುದರಿಂದ ಜನತೆಗೆ ತೊಂದರೆಯಾಗುತ್ತದೆ. ಇದು ಆಗಬಾರದೆಂದು ನಾನು ವಿರೋಧ ಮಾಡುತ್ತೇನೆ.

ಶ್ರೀ ಧರ್ಮಸಿಂಗ್ (ನಗರಾಭಿವೃದ್ಧಿ ಮಂತ್ರಿಯವರು)—ಮಾನ್ಯ ಅಧ್ಯಕ್ಷರೇ, ಮಾತನಾಡಿದಂತ ಎಲ್ಲ ಸದಸ್ಯರುಗಳ ಅಭಿಪ್ರಾಯಗಳನ್ನು ಕ್ರೋಢೀಕರಿಸಿದರೆ ಈ ತಿದ್ದುಪಡಿಯಿಂದ ರಾಜ್ಯಾಂಗಕ್ಕೆ ವಿರೋಧವಾಗಿದೆ ಎನ್ನುವ ಅಭಿಪ್ರಾಯ ಬರುವಂತೆ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಪಟೇಲರು ಇದರಿಂದ ಅನಾಹುತವಾಗುತ್ತದೆಂದು ಹೇಳಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕರಿಗೆ ನೇರವಾಗಿ ಸವಲತ್ತುಗಳನ್ನು ದೊರಕಿಸಿಕೊಡುವ ರೀತಿಯಲ್ಲಿ ಇದನ್ನು ತರಲಾಗಿದೆ. ಮತ್ತೆ ಬೇರೆ ರಾಜ್ಯಗಳಲ್ಲಿಯೂ ಇದನ್ನು ಮಾಡಿರುವುದರಿಂದ ಅದನ್ನು ಆಳವಡಿಸಿಕೊಂಡಿದ್ದೇವೆ. ೧೯೫೫ರಲ್ಲಿ ಅಹಮದಾಬಾದಿನಲ್ಲಿ ಮಾಡಿದ್ದಾರೆ, ೧೯೪೯ರಲ್ಲಿ ಪೂನಾದಲ್ಲಿ ಮಾಡಿದ್ದಾರೆ. ರಾಜ್ಯಾಂಗದ ವಿಧಿ ೨೯೩ನೇ ಪ್ರಕಾರ ಕಮೀಷನರ್ ಆಫ್ ಟ್ರಾನ್ಸ್‌ಪೋರ್ಟ್ ಮಾಡಿದ್ದಾರೆ. ಬಾಂಬೆ ಕಾರ್ಪೊರೇಷನ್ ಆಕ್ಟ್‌ನಲ್ಲಿ ಮಾಡಿದ್ದಾರೆ. ೧೯೬೨ ರಲ್ಲಿ ಹುಬ್ಬಳ್ಳಿ ಧಾರವಾಡಕ್ಕೆ ಮಾಡಿದ್ದಾರೆ. ಮುನಿಸಿಪಾಲಿಟಿಗಳನ್ನು ಕಾರ್ಪೊರೇಷನ್‌ಗಳಾಗಿ ಕನ್‌ವರ್ಟ್ ಮಾಡಿದ ಮೇಲೆ, ಕಾನೂನು ಮತ್ತು ಕಟ್ಟಳೆಗಳ ಬಗ್ಗೆ ಒಂದು ಒಳ್ಳೆಯ ವಾತಾವರಣ ಬೆಳೆದುಕೊಂಡು ಬರಲಿ ಎನ್ನುವ ದೃಷ್ಟಿಯಿಂದ ಮಾಡುತ್ತಿದ್ದೇವೆ, ಚುನಾವಣೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಅದರ ಬಗ್ಗೆ ಚರ್ಚೆ ಮಾಡೋಣ. ಮಾನ್ಯ ಸದಸ್ಯರುಗಳು ಹೇಳಿದಂತೆ ಮೇಯರುಗಳನ್ನು ಮತ್ತು ಉಪ ಮೇಯರುಗಳನ್ನು ನಾಮಕರಣ ಮಾಡುವಾಗ, ಪಟ್ಟಣದಲ್ಲಿರತಕ್ಕ, ಸಾರ್ವಜನಿಕ ಜೀವನದಲ್ಲಿರತಕ್ಕ, ಅನುಭವ ಇರತಕ್ಕ ಜನರನ್ನು ನೋಡಿ ಮಾಡುತ್ತೇವೆ, ಯಾವುದಕ್ಕೂ ಧಕ್ಕೆ ಬಾರದ ರೀತಿಯಲ್ಲಿ ಮಾಡುತ್ತೇವೆ, ಮತ್ತೆ ಮಾನ್ಯ ಸದಸ್ಯರುಗಳು ಸಿಟಿ ಮುನಿಸಿಪಾಲಿಟಿಗಳಿಗೆ ಹೆಚ್ಚಿಗೆ ಹಣ ಕೊಡುವ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಈ ವಿಚಾರದಲ್ಲಿ ಸರ್ಕಾರಕ್ಕೆ ಹೆಚ್ಚು ಕಾಳಜಿ ಇದ್ದು, ಗುಲಾಟಿ ಕಮೀಷನ್ ನೇಮಕ ಮಾಡಿದ್ದು, ಸಾಕಷ್ಟು ಹಣ ಕೂಡುತ್ತಿದ್ದೇವೆ. ಹುಬ್ಬಳ್ಳಿ ಮತ್ತು ಧಾರವಾಡ ಕಾರ್ಪೊರೇಷನ್‌ಗೆ ನೀರಿಗಾಗಿ ಮತ್ತು ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ಕಳೆದ ೫-೬ ವರ್ಷಗಳಿಗಿಂತ ಹೆಚ್ಚಿಗೆ ಹಣ ಕೊಟ್ಟಿದ್ದೇವೆ. ಬೆಂಗಳೂರು ನಗರ ಕಾರ್ಪೊರೇಷನ್‌ಗೆ ಸಂಬಂಧಪಟ್ಟಂತೆ, ಜನಸಂಖ್ಯೆ ಆಧಾರದ ಮೇಲೆ, ಆದಾಯದ ಆಧಾರದ ಮೇಲೆ, ಸಾಲ ವಗೈರೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಆದುದರಿಂದ, ಈ ತಿದ್ದುಪಡಿಯಿಂದ ಯಾವ ರೀತಿಯ ಅನಾಹುತವೂ ಆಗುವುದಿಲ್ಲ ವಾದ್ದರಿಂದ ಈ ತಿದ್ದುಪಡಿಗೆ ಮಾನ್ಯ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ಮೈಸೂರು ಕಾರ್ಪೊರೇಷನ್‌ಗೆ ಇದು ಅನ್ವಯಿಸುವುದಿಲ್ಲವೆ ?

ಶ್ರೀ ಸಿ. ಎಂ. ಇಬ್ರಾಹಿಂ.—ಭದ್ರಾವತಿ ಮತ್ತು ಶಿವಮೊಗ್ಗ ಕಾರ್ಪೊರೇಷನ್ ಮಾಡಂತ್ತಿದ್ದೀರಿ ನಗರಗಳ ಮಧ್ಯೆ ಇರತಕ್ಕ ಅಂತರ ಹತ್ತು ಮೈಲಿಗಳಾಗಂತ್ತವೆ. ಈ ಮಧ್ಯ ನೀರಾವರಿ ಜಮೀನುಗಳು ಇವೆ, ೨೫ ರೂಪಾಯಿಗಳಿಂದ ೫೦೦ ರೂಪಾಯಿ ಬೆಲೆ ಬಾಳುವವರಿಗೆ ಸೈಟುಗಳು ಇವೆ, ಕಾರ್ಪೊರೇಷನ್ ಪ್ರಕಾರ ನೀವು ೧೦೦ ರೂಪಾಯಿ ಟ್ಯಾಕ್ಸ್ ಹಾಕಿದರೆ, ಬಡವರು ಯಾರು ಸೈಟುಗಳನ್ನು ಇಟ್ಟು ಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಧರ್ಮಸಿಂಗ್.—ನಾವು ನೀವು ಕೂತು ಸಮಾಲೋಚನೆ ಮಾಡೋಣ.

MR. DEPUTY SPEAKER.—Now, I will put the consideration Motion to vote. The question is ;

"That the Karnataka Municipal Corporations (Amendment) Bill, 1982 be taken into consideration".

The Motion was adopted

CLAUSE 2

MR. DEPUTY SPEAKER.—The question is:

"That Clause 2 do stand part of the Bill".

The motion was adopted.

Clause 2 was added to the Bill.

CLAUSE 3

MR. DEPUTY SPEAKER.—In respect of clause 3, there is an amendment given notice of by Sri H. Gangadharan.

SRI H. GANGADHARAN.—I move :

"That at page 2 in line 12 and 13 for the proposed words 'three years' the words 'six months' shall be substituted".

"That at page 2 in the proposed Section 503A after the words 'think fit' the words "to the Corporations constituted hereafter shall be added".

MR. DEPUTY SPEAKER.—Amendments moved. The question is:

"That at page 2 in line 12 and 13 for the proposed words 'three years' the words 'six months shall be substituted".

"That at page 2 in the proposed Section 503A after the words 'think fit' the words 'to the Corporations constituted hareafter' shall be added".

The Amendments were negatived

MR. DEPUTY SPEAKER.—Now, I will put clause 3 to vote. The question is:

"That clause 3 do stand part of the Bill".

The motion was adopted

Clause 3 was added to the Bill.

CLAUSE 4

MR. DEPUTY SPEAKER.—The question is:

"That Clause 4 do stand part of the Bill."

The motion was adopted

Clause 4 was added to the Bill.

CLAUSE 1, etc,.

MR. DEPUTY SPEAKER.—The question is :

"That clause 1, the Long Title, the Preamble and the Enacting Formula do stand part of the Bill".

The Motion was adopted

Clause 1, the Long Title, the Preamble and the Enacting Formula were added to the Bill.

5 P.M.

Motion to Pass

SRI DHARAM SINGH.—Sir, I beg to move :

"That the Karnataka Municipal Corporations (Amendment) Bill, 1982, be passed."

MR. DEPUTY SPEAKER.—The question is :

"That the Karnataka Municipal Corporations (Amendment) Bill, 1982, be passed."

Motion was adopted and the Bill was passed

MR. DEPUTY SPEAKER.—We shall take up the next Bill *i.e.*, The Karnataka Electricity (Taxation on Consumption) (Amendment) Bill, 1982.

THE KARNATAKA ELECTRICITY (TAXATION ON CONSUMPTION) (AMENDMENT) BILL, 1982.

Motion to Consider

SRI G. H. ASHWATHA REDDY (Minister of State for Power).—Sir, I move :

"That the Karnataka Electricity (Taxation on Consumption) (Amendment) Bill, 1982 be taken into consideration."

The Question was proposed